# ನಿಮ್ಮೊಡನೆ

## ಚಿತ್ರೋತ್ಸವವೂ, ಚಿತ್ರೋದ್ಯಮವೂ..

ಭಾಷೆ, ಸಾಹಿತ್ಯ ಮತ್ತು ಸಿನಿಮಾಗಳ ನಡುವಣ ಸಂಬಂಧ ಒಂದು ನಾಡಿನ ಸಂಸ್ಕೃತಿಯ ಗುಣಮಟ್ಟವನ್ನೂ ನಿರ್ಧರಿಸುತ್ತದೆ. ಯಾವ ದೇಶದಲ್ಲಿ ಅತ್ಯುತ್ತಮ ಸಿನಿಮಾಗಳು ಬರುತ್ತವೆಯೋ ಅಲ್ಲಿಯ ಸಂಸ್ಕೃತಿ ಶ್ರೀಮಂತವಾಗಿದೆ ಎಂದರ್ಥ. ಸಿನಿಮಾದಲ್ಲಿ ಶ್ರೇಷ್ಠತೆಯನ್ನು ನಿರ್ಧರಿಸುವುದು ಹೇಗೆ? ಆಯಾ ಪ್ರದೇಶ ಮತ್ತು ಕಾಲಘಟ್ಟಗಳ ಸ್ಥಿತಿ-ಗತಿಗೆ ಸ್ಪಂದಿಸುವ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಸಿನಿಮಾಗಳನ್ನು ಒಟ್ಟರ್ಥದಲ್ಲಿ ಶ್ರೇಷ್ಠ ಎಂದು ಪರಿಗಣಿಸಬಹುದು. ಇಲ್ಲಿ ತಂತ್ರಜ್ಞಾನದ ಶ್ರೀಮಂತಿಕೆ ನೆಪಮಾತ್ರಕ್ಕಷ್ಟೆ. ಶ್ರೇಷ್ಠ ಸಿನಿಮಾವೊಂದು ಕಾಲ- ದೇಶಗಳ ಪರಿಧಿಯನ್ನೂ ಮೀರಿ ಎಲ್ಲ ಜನವರ್ಗದ ಸಂವೇದನೆಗಳನ್ನು ಬಡಿದೆಬ್ಬಿಸುವ ಸಾಮರ್ಥ್ಯ ಹೊಂದಿರುತ್ತದೆ. ಅಂತರರಾಷ್ಟ್ರೀಯ ಸಿನಿಮೋತ್ಸವಗಳಲ್ಲಿ ಹೀಗೆ ವಿವಿಧ ಕಾಲ- ದೇಶಗಳ ಜನಸಂಸ್ಕೃತಿಗೆ ಕೈಗನ್ನಡಿಯಾಗಬಲ್ಲ ನೂರಾರು ಸಿನಿಮಾಗಳು ಪ್ರದರ್ಶನಗೊಳ್ಳುತ್ತವೆ. ಭಾಷೆ, ದೇಶಗಳ ಗಡಿಯನ್ನೂ ಮೀರಿ ಈ ಸಿನಿಮಾಗಳು ವಿಶ್ವಾದ್ಯಂತ ಮನುಷ್ಯ ಮನಸ್ಸುಗಳನ್ನು ಮುಟ್ಟುವ, ತಟ್ಟುವ, ಹದಗೊಳಿಸುವ ಕೆಲಸವನ್ನು ಮಾಡುತ್ತವೆ.

> ಗಾಂಧಿನಗರದ ಈ ಪ್ರವೃತ್ತಿ ಏನನ್ನು ಸೂಚಿಸುತ್ತದೆ? ಕನ್ನಡ ಸಿನಿಮಾದ ಮಂದಿ ಜಗತ್ತಿನ ಇತರ ದೇಶಗಳ ಸಿನಿಮಾಗಳಿಂದ ಕಲಿತುಕೊಳ್ಳುವುದು ಏನೂ ಇಲ್ಲವೆಂದೆ?

ಬೆಂಗಳೂರಿನಲ್ಲಿ ಇದೀಗ ತಾನೆ ಮುಗಿದ ಏಳನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಹೀಗೆ ಮನುಷ್ಯ ಸಂವೇದನೆಯನ್ನು ದೃಢಗೊಳಿಸಿದ ನೂರಾರು ಸಿನಿಮಾಗಳು ಪ್ರದರ್ಶನ ಕಂಡವು. ಪ್ರತಿಯೊಂದು ಚಲನಚಿತ್ರವೂ ಆ ದೇಶದ ವಿಶಿಷ್ಟ ಸಂಸ್ಕೃತಿಯ, ವಿಭಿನ್ನ ಅನುಭವಗಳ ಕಥನಗಳನ್ನು ಸಾರಿದವು. 'ಅಂತಿಮವಾಗಿ ಎಲ್ಲ ಮನುಷ್ಯರೂ, ಅವರ ಸುಖ-ದುಃಖಗಳಿಗೆ ಇರುವ ಸಂವೇದನೆಗಳೂ ಒಂದೇ. ಶೋಷಕ ಶಕ್ತಿಗಳ ಎದುರು ತಲೆಬಾಗದ ಚೇತನಗಳು ಎಲ್ಲ ದೇಶಗಳಲ್ಲೂ ಇವೆ' ಎಂದು ಈ ಸಿನಿಮಾಗಳು ಎತ್ತಿ ತೋರಿದವು. ಈ ಸಿನಿಮೋತ್ಸವದಲ್ಲಿ ಪ್ರದರ್ಶನ ಕಂಡ ಹಲವು ಕನ್ನಡ ಸಿನಿಮಾಗಳೂ ಗಮನ ಸೆಳೆದವು. ವಿಶ್ವದ ಶ್ರೇಷ್ಠ ಸಿನಿಮಾಗಳ ಸಾಲಿನಲ್ಲಿ ನಿಲ್ಲಲು ತವಕಿಸುತ್ತಿರುವಂತಹ ಸಿನಿಮಾಗಳನ್ನು ಕನ್ನಡಿಗರೂ ನಿರ್ಮಿಸಬಲ್ಲರು ಎನ್ನುವುದನ್ನು ಈ ಸಿನಿಮೋತ್ಸವ ಸ್ಪಷ್ಟಪಡಿಸಿತು. ಜತೆಗೇ ವಿಶ್ವದ ಶ್ರೇಷ್ಠ ಸಿನಿಮಾಗಳಿಂದ ನಾವು ಕಲಿಯಬೇಕಾದದ್ದೂ ಬಹಳಷ್ಟಿದೆ ಎನ್ನುವುದು ಗೊತ್ತಾಯಿತು.

ಸೂಕ್ಷ್ಮವಾಗಿ ನೋಡಿದರೆ, ಶ್ರೇಷ್ಠ ಸಿನಿಮಾಗಳ ನಿರ್ಮಾಣದಲ್ಲಿ ಪಾಶ್ಚಾತ್ಯ ದೇಶಗಳಿಗಿಂತ, ಪೌರ್ವಾತ್ಯ ದೇಶಗಳೇ ಮುಂದಿವೆ ಎನ್ನುವುದನ್ನು ಈ ಸಿನಿಮೋತ್ಸವ ಮತ್ತೊಮ್ಮೆ ಸ್ಪಷ್ಟಪಡಿಸಿತು. ಭಾರತ, ಶ್ರೀಲಂಕಾ, ಇರಾನ್, ಟರ್ಕಿ, ಪಾಕಿಸ್ತಾನ, ಪ್ಯಾಲಸ್ತೀನ್, ಥಾಯ್ಲೆಂಡ್, ಜಪಾನ್, ನೆದರ್ಲೆಂಡ್, ಪೋಲೆಂಡ್‌ಗಳ ಹಲವು ಅತ್ಯುತ್ತಮ ಸಿನಿಮಾಗಳು ಪ್ರೇಕ್ಷಕರಿಗೆ ಹೊಸ ಲೋಕವೊಂದನ್ನು ಕಟ್ಟಿಕೊಟ್ಟವು. ರಂಗಭೂಮಿ ಮತ್ತು ಸಿನಿಮಾದ ವಿದ್ಯಾರ್ಥಿಗಳಂತೂ ಈ ಸಿನಿಮೋತ್ಸವವನ್ನು ಒಂದು ಸಂಭ್ರಮದಂತೆ ಎದುರುಗೊಂಡರು.

ವಿಪರ್ಯಾಸದ ಸಂಗತಿಯೆಂದರೆ, ಕನ್ನಡ ಚಿತ್ರರಂಗ ಈ ಸಿನಿಮೋತ್ಸವಕ್ಕೆ ತಣ್ಣನೆಯ ಪ್ರತಿಕ್ರಿಯೆ ತೋರಿದ್ದು. 40ಕ್ಕೂ ಹೆಚ್ಚು ದೇಶಗಳ 144 ಸಿನಿಮಾಗಳ ಪ್ರದರ್ಶನಕ್ಕೆ ಸುಮಾರು 500 ಪಾಸ್‌ಗಳನ್ನು ಗಾಂಧಿನಗರದ ಮಂದಿಗೇ ವಿತರಿಸಲಾಗಿತ್ತು. ಆದರೆ ಈ ಪಾಸ್ ಪಡೆದವರಲ್ಲಿ ಥಿಯೇಟರುಗಳಲ್ಲಿ ಕಾಣಿಸಿಕೊಂಡವರು ಕೈಬೆರಳೆಣಿಕೆಯಷ್ಟು ಜನ! ಅದರಲ್ಲೂ ಕನ್ನಡದ ಖ್ಯಾತನಾಮ ನಟ- ನಟಿಯರು, ತಂತ್ರಜ್ಞರು ತಪ್ಪಿಯೂ ಈ ಕಡೆಗೆ ಮುಖ ಹಾಕಲಿಲ್ಲ. ಉದ್ಘಾಟನೆ ಮತ್ತು ಮುಕ್ತಾಯ ಸಮಾರಂಭಕ್ಕೆ ಆಹ್ವಾನಿತರಾದ ತಪ್ಪಿಗೆ ವೇದಿಕೆಯಲ್ಲಿ ಕುಳಿತ ಖ್ಯಾತ ತಾರೆಯರೂ, ಸಿನಿಮಾ ಪ್ರದರ್ಶನಕ್ಕೆ ನಿಲ್ಲಲಿಲ್ಲ. ಸಿನಿಮಾದ ಕೋಟಾದಲ್ಲಿ ಸಚಿವಗಿರಿ ಗಿಟ್ಟಿಸಿಕೊಂಡ ಸಚಿವ ಅಂಬರೀಶ್ ಅವರಂತೂ ಪತ್ತೆಯೇ ಇರಲಿಲ್ಲ. ಸಮಾಧಾನದ ಸಂಗತಿಯೆಂದರೆ, ಹೊಸ ಅಲೆಯ, ಪ್ರಯೋಗಾತ್ಮಕ ಚಿತ್ರಗಳನ್ನು ಮಾಡುತ್ತಿರುವ ಹಿರಿಯ- ಕಿರಿಯ ಕೆಲವು ನಿರ್ದೇಶಕರು ಮಾತ್ರ ವ್ರತದಂತೆ ಸಿನಿಮಾಗಳನ್ನು ನೋಡಲು ಬಂದಿದ್ದು.

ಗಾಂಧಿನಗರದ ಈ ಪ್ರವೃತ್ತಿ ಏನನ್ನು ಸೂಚಿಸುತ್ತದೆ? ಕನ್ನಡ ಸಿನಿಮಾದ ಮಂದಿ ಜಗತ್ತಿನ ಇತರ ದೇಶಗಳ ಸಿನಿಮಾಗಳಿಂದ ಕಲಿತುಕೊಳ್ಳುವುದು ಏನೂ ಇಲ್ಲವೆಂದೆ? ಅಥವಾ ಕನ್ನಡದ ನಟ-ನಟಿಯರಿಗೆ, ನಿರ್ಮಾಪಕರಿಗೆ, ತಂತ್ರಜ್ಞರಿಗೆ ಅತ್ಯುತ್ತಮ ಸಿನಿಮಾಗಳನ್ನು ನೋಡುವ, ಗ್ರಹಿಸುವ ಸಾಮರ್ಥ್ಯ ಮತ್ತು ಆಸಕ್ತಿ ಇಲ್ಲವೆಂದೆ? ಈ ವರ್ಷ ಕನ್ನಡದಲ್ಲಿ ತೆರೆ ಕಂಡ ಸಿನಿಮಾಗಳಲ್ಲಿ ಶೇಕಡಾ 25ರಷ್ಟು ರಿಮೇಕ್ ಚಿತ್ರಗಳೇ ಇವೆ. ವಿಪರ್ಯಾಸದ ಸಂಗತಿಯೆಂದರೆ ಬಾಕ್ಸಾಫೀಸ್‌ನಲ್ಲಿ ಯಶಸ್ವಿಯಾದ ಚಿತ್ರಗಳಲ್ಲೂ ಈ ರಿಮೇಕ್‌ಗಳದ್ದೇ ಸಿಂಹಪಾಲು. ಕನ್ನಡ ಸಿನಿಮಾ ನಿರ್ಮಾಪಕರು ಒಂದೆಡೆ ಕನ್ನಡ ಸಾಹಿತ್ಯಲೋಕದ ಬಗ್ಗೆಯೂ ನಿರಾಸಕ್ತಿ ತಾಳಿದ್ದಾರೆ; ಇನ್ನೊಂದೆಡೆ ಜಗತ್ತಿನ ಅತ್ಯುತ್ತಮ ಸಿನಿಮಾಗಳ ಬಗ್ಗೆಯೂ ಕುರುಡರಾಗಿದ್ದಾರೆ. ಅದೇ ಮಚ್ಚು, ಕೊಚ್ಚು, ಬಾಲಿಶ ಪ್ರೀತಿ-ಪ್ರೇಮಗಳ ನಿರೂಪಣೆಯಲ್ಲಿ ಸುಖಪಡುತ್ತಾ, ಚರ್ವಿತ-ಚರ್ವಣ ಕಥೆಗಳಲ್ಲಿ ತೆವಳುತ್ತಿರುವ ಕನ್ನಡ ಚಿತ್ರರಂಗಕ್ಕೆ ಪುನಃಶ್ಚೇತನ ನೀಡುವಲ್ಲಿ ಇಂತಹ ಚಲನಚಿತ್ರೋತ್ಸವಗಳು ಮಹತ್ವದ ಪಾತ್ರ ವಹಿಸುವ ಸಾಧ್ಯತೆ ಇತ್ತು. ಆದರೆ ಈ ಮಹತ್ವವನ್ನು ಅರಿತುಕೊಳ್ಳುವಲ್ಲಿ ಗಾಂಧಿನಗರ ವಿಫಲವಾಗಿರುವುದು ದುರಂತವೇ ಸರಿ.

■ ಬಿ.ಎಂ.ಹನೀಫ್





ಈಶ್ವರ್